**ಸೌಲಭ್ಯಗಳು-2, ರವರ ಅಧ್ಯಕ್ಷತೆಯಲ್ಲಿ ನಡೆದ ಗ್ರಾಮೀಣ ಇಂಧನ ಕಾರ್ಯಕ್ರಮದ ಪ್ರಗತಿ ಪರಿಶೀಲನಾ ಸಭೆಯ ನಡವಳಿಗಳು**

ಸಭೆಯಲ್ಲಿ ಹಾಜರಿದ್ದವರು ; ಪಟ್ಟಿ ಲಗತ್ತಿಸಿದೆ.

ಶ್ರೀ ರವಿ ಕುಮಾರ್, ಉಪ ನಿರ್ದೇಶಕರು (ಪ್ರಭಾರ)(ಗ್ರಾಮೂಸೌ-2) ರವರು ಸಭೆಯಲ್ಲಿ ಉಪಸ್ಥಿತರಿದ್ದವರನೆಲ್ಲಾ ಸ್ವಾಗತಿಸಿದರು.

1. ಶ್ರೀ ಎನ್. ಕೃಷ್ಣಪ್ಪ ಕೋಡಿಪಾಳ್ಯ, ನಿರ್ದೇಶಕರು (ಗ್ರಾಮೂಸೌ-2) ರವರು 2017-18ನೇ ಸಾಲಿನ ಜುಲೈ 2017ರ ಅಂತ್ಯದವರೆಗಿನ ಪ್ರಗತಿ ವರದಿಯನ್ನು ಪರಿಶೀಲಿಸಿದಾಗ ಬಹುತೇಕ ಜಿಲ್ಲೆಗಳು ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಯೋಜನೆಯಡಿ ಶೂನ್ಯ ಪ್ರಗತಿ ಸಾಧಿಸಿಯುವುದನ್ನು ಗಂಭೀರವಾಗಿ ಪರಿಗಣಿಸಿ ಕೂಡಲೇ ಪ್ರಗತಿ ಸಾಧಿಸಲು ಅಗತ್ಯ ಕ್ರಮಕೈಗೊಳ್ಳುವಂತೆ ಯೋಜನಾ ಅಭಿಯಂತರರಿಗೆ ತಿಳಿಸಿದರು ಹಾಗೂ ಶೂನ್ಯ ಪ್ರಗತಿ ಸಾಧಿಸಿದ ಜಿಲ್ಲೆಗಳ ಯೋಜನಾ ಅಭಿಯಂತರರಿಗೆ ಕಾರಣ ಕೇಳುವ ನೋಟಿಸ್‌ನ್ನು ಜಾರಿಗೊಳಿಸಲು ತೀರ್ಮಾನಿಸಲಾಯಿತು.
2. ಕಾರ್ಯಕ್ರಮದಡಿ ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ IEC ಚಟುವಟಿಕೆಗಳನ್ನು ಚುರುಕುಗೊಳಿಸುವ ನಿಟ್ಟನಲ್ಲಿ ಕೈಪಿಡಿಗಳು, Brochures ಗಳನ್ನು ಮುದ್ರಿಸಿ ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ಪ್ರಚುರಪಡಿಸಲು ಹಾಗೂ ಈ ಚಟುವಟಿಕೆಗಳನ್ನು ವಿಭಾಗೀಯ ಹಾಗೂ ಜಿಲ್ಲಾ ಮಟ್ಟದಲ್ಲಿ ಕಾರ್ಯಾಗಾರ ನಡೆಸುವ ಕುರಿತಂತೆ ತೀರ್ಮಾನಿಸಲಾಯಿತು. ಅದರ ವೆಚ್ಚವನ್ನು ಕಾರ್ಯಕ್ರಮದ ಮಾರ್ಗಸೂಚಿಯನ್ವಯ ವೆಚ್ಚ ಭರಿಸಲು ನಿರ್ಣಯಿಸಲಾಯಿತು
3. 2016-17ನೇ ಸಾಲಿನಲ್ಲಿ ಕಾರ್ಯಕ್ರಮದಡಿ ಹಣ ಬಳಕೆ ಪ್ರಮಾಣ ಪತ್ರವನ್ನು ಬೆಂಗಳೂರು(ಗ್ರಾ), ಬಳ್ಳಾರಿ, ಚಾಮರಾಜನಗರ, ಚಿಕ್ಕಮಗಳೂರು, ಚಿತ್ರದುರ್ಗ, ದಕ್ಷಿಣ ಕನ್ನಡ, ಕಲಬುರಗಿ, ಕೋಲಾರ, ಕೊಪ್ಪಳ, ರಾಮನಗರ, ರಾಯಚೂರು ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಸಿಎ ಆಡಿಟ್ ವರದಿಯೊಂದಿಗೆ ಹಣ ಬಳಕೆ ಪ್ರಮಾಣ ಪತ್ರವನ್ನು ಕೂಡಲೇ ಸರ್ಕಾರಕ್ಕೆ ಸಲ್ಲಿಸಲು ಕ್ರಮಕೈಗೊಳ್ಳುವಂತೆ ತೀರ್ಮಾನಿಸಲಾಯಿತು.
4. 2013-14ನೇ ಸಾಲಿನಿಂದ 2015-16ನೇ ಸಾಲಿನವರೆಗೆ ನಿರ್ಮಿಸಲಾದ ಅನಿಲ ಸ್ಥಾವರಗಳಿಗೆ ಕೇಂದ್ರ ಹಾಗೂ ರಾಜ್ಯ ಸಹಾಯಧನ ಪಾವತಿಸುವ ಕುರಿತಂತೆ ಈಗಾಗಲೇ ನೀಡಲಾದ ನಿಗದಿತ ನಮೂನೆಯಲ್ಲಿ ಮಾಹಿತಿಯನ್ನು ನೀಡುವಂತೆ ಸಂಬಂಧಿತ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಕ್ರಮ ಕೈಗೊಳ್ಳುವಂತೆ ತೀರ್ಮಾನಿಸಲಾಯಿತು.
5. 2016-17 ಹಾಗೂ ಹಿಂದಿನ ಸಾಲುಗಳ ಕಾರ್ಯಕ್ರಮದ ಫಲಾನುಭವಿಗಳ ವಿವರಗಳನ್ನು PDF Format ಮುಖೇನಾ ಇಲಾಖಾ Website ನಲ್ಲಿ ಇಂಧೀಕರಿಸುವಂತೆ ತೀರ್ಮಾನಿಸಲಾಯಿತು.
6. ನವ ಮತ್ತು ನವೀಕರಿಸಬಹುದಾದ ಇಂಧನ ಮೂಲಗಳ ಮಂತ್ರಾಲಯ, ನವ ದೆಹಲಿ, ಪತ್ರ ಸಂಖ್ಯೆ 5-1/2017BG(NBMMP), ದಿನಾಂಕ 03.07.2017ರಲ್ಲಿ ಕೇಂದ್ರ ಸರ್ಕಾರದ ಪತ್ರ ದಿನಾಂಕ 30.06.2014ರಲ್ಲಿನ ಮಾರ್ಗಸೂಚಿ / ಆಡಳಿತಾತ್ಮಕ ಅನುಮೋದನೆಯನ್ನೇ 2017-18ನೇ ಸಾಲಿನ ಕಾರ್ಯಕ್ರಮದ ಅನುಷ್ಠಾನಕ್ಕೆ ಮುಂದುವರಿಸಿದೆ ಎಂದು ತಿಳಿಸಿರುವ ಹಿನ್ನೆಲೆಯಲ್ಲಿ ಹಿಂದಿನ ಸಾಲಿನಲ್ಲಿ ಹೊರಡಿಸಿದ ಕಾರ್ಯಕ್ರಮದ ಮಾರ್ಗಸೂಚಿ / ಆಡಳಿತಾತ್ಮಕ ಅನುಮೋದನೆಯನ್ನೇ 2017-18ನೇ ಸಾಲಿಗೆ ಮುಂದುವರೆಸಿದೆ.
7. ಕೇಂದ್ರ ಸರ್ಕಾರದ ಅನುಮೋದಿತ ಮಾದರಿಯ ಘಟಕಗಳಲ್ಲಿ ಶಕ್ತಿ ಸುರಭಿ ಮಾದರಿ ಘಟಕವು ಸಹ ಒಂದಾಗಿದ್ದು, ಜಿಲ್ಲೆಯಲ್ಲಿನ ಅಗತ್ಯತೆ ಅಥವಾ ಬೇಡಿಕೆ ಅನುಗುಣವಾಗಿ ಸದರಿ ಮಾದರಿಯನ್ನು ಸಹ ಅನುಷ್ಠಾನಗೊಳಿಸಲು ಕ್ರಮಕೈಗೊಳ್ಳುವಂತೆ ತೀರ್ಮಾನಿಸಲಾಯಿತು.

8. ಪ್ರತಿ ವರ್ಷ ಕಾರ್ಯಕ್ರಮದಡಿ ಬಿಡುಗಡೆ ಮಾಡುವ ಕೇಂದ್ರ ಹಾಗೂ ರಾಜ್ಯ ಸಹಾಯಧನವನ್ನು ನಿರಂತರವಾಗಿ ಉಡುಪಿ ಜಿಲ್ಲೆಯು ಕಾರ್ಯಕ್ರಮದ ಅನುಷ್ಠಾನ ವಿನಿಯೋಗಿಸದೇ ವ್ಯಪಗತ ಮಾಡುತ್ತಿರುವುದನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸುತ್ತಾ, ಇನ್ನುಮುಂದೆ ಕಾರ್ಯಕ್ರಮದಡಿ ಬಿಡುಗಡೆಯಾಗುವ ಅನುದಾನವನ್ನು ವ್ಯಪಗತ ಮಾಡದಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಉಡುಪಿ ರವರು ಸೂಕ್ತಕ್ರಮ ವಹಿಸುವಂತೆ ತೀರ್ಮಾನಿಸಲಾಯಿತು.

9. ಕಾರ್ಯಕ್ರಮದಡಿ ನೀಡಲಾಗುವ ಸಹಾಯಧನಕ್ಕೆ ಶೇ.5ರಷ್ಟು GST ಕಡಿತಗೊಳಿಸುವ ಕುರಿತಂತೆ ಆಂತರಿಕ ಆರ್ಥಿಕ ಸಲಹೆಗಾರರ ಅಭಿಪ್ರಾಯ ಪಡೆದು ಕ್ರಮ ವಹಿಸಬಹುದಾದ ಕುರಿತಂತೆ ತೀರ್ಮಾನಿಸಲಾಯಿತು.

10. ಉಪ ನಿರ್ದೇಶಕರು, ಜಿಲ್ಲಾ ಪಂಚಾಯತ್, ಚಿಕ್ಕಮಗಳೂರು ರವರು ಚಿಕ್ಕಮಗಳೂರು ಜಿಲ್ಲೆಯಲ್ಲಿ ಯೋಜನಾ ಅಭಿಯಂತರರ ಅನಾರೋಗ್ಯದ ಕಾರಣ ಕಾರ್ಯಕ್ರಮವನ್ನು ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಗೊಳಿಸಲು ಕಷ್ಟಸಾಧ್ಯವಾಗುತ್ತಿದೆ ರಂದು ತಿಳಿಸಿರುವ ಹಿನ್ನೆಲೆಯಲ್ಲಿ PRED ಯಲ್ಲಿನ ಕಿರಿಯ ಅಭಿಯಂತರರಿಗೆ ಹೆಚ್ಚುವರಿ ಪ್ರಭಾರವನ್ನು ವಹಿಸುವಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಚಿಕ್ಕಮಗಳೂರು ರವರು ಕ್ರಮವಹಿಸುವುದು.

11. ಜಿಲ್ಲೆಗಳಲ್ಲಿ ಕಾರ್ಯಕ್ರಮದಡಿ ಬಿಡುಗಡೆ ಮಾಡುವ ಕೇಂದ್ರ ಮತ್ತು ರಾಜ್ಯ ಸಹಾಯಧನ, ವೆಚ್ಚ, ಇತ್ಯಾದಿ ವಿವರಗಳನ್ನು ಇಂಧೀಕರಿಸಲು ಸೂಕ್ತ Software ನ್ನು ಅಭಿವೃದ್ಧಿ ಪಡಿಸಲು NIC ರವರಿಗೆ ಕೋರಬಹುದಾದ ಪೂರ್ವದಲ್ಲಿ ಯೋಜನಾ ಅಭಿಯಂತರರು, ಬೆಂಗಳೂರು(ಗ್ರಾ) ಮತ್ತು ಬೆಳಗಾವಿ ಜಿಲ್ಲಾ ಪಂಚಾಯತ್ ರವರು ನಿರ್ದೇಶಕರು, ಗ್ರಾಮೂಸೌ-2 ರವರೊಂದಿಗೆ ಚರ್ಚಿಸುವಂತೆ ತೀರ್ಮಾನಿಸಲಾಯಿತು.

12. 2016-17ನೇ ಸಾಲಿನಲ್ಲಿ ನೂತನ ಸೌರ ಬೆಳಕು ಯೋಜನೆಯಡಿ ಸೌರ ಬೀದಿ ದೀಪಗಳ ಅನುಷ್ಠಾನ ಹಾಗೂ ಕಾರ್ಯಾಚರಣೆ ಕುರಿತಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಬಾಗಲಕೋಟೆ, ಕಲಬುರಗಿ ಮತ್ತು ರಾಮನಗರ ರವರು ಕೂಡಲೇ ಕ್ರಮಕೈಗೊಂಡು ಸರ್ಕಾರಕ್ಕೆ ವರದಿ ಹಾಗೂ ಹಣ ಬಳಕೆ ಪ್ರಮಾಣ ಪತ್ರವನ್ನು ನೀಡುವಂತೆ ತೀರ್ಮಾನಿಸಲಾಯಿತು.

13. ನೂತನ ಸೌರ ಬೆಳಕು ಯೋಜನೆಯಡಿ ನಿಗದಿಪಡಿಸಿದ ಅನುದಾನದಲ್ಲಿ ಒಂದು ಕಿರುಚಿತ್ರ (Documentary) ತಯಾರಿಸಲು ನಿಯಮಾನುಸಾರ ಕ್ರಮವಹಿಸಲು ತೀರ್ಮಾನಿಸಲಾಯಿತು.

14. ಶ್ರೀ ನಂಜುಂಡೇಗೌಡ, ಯೋಜನಾ ಅಭಿಯಂತರರನ್ನು ರಾಮನಗರ ಜಿಲ್ಲಾ ಪಂಚಾಯತ್‌ನಲ್ಲಿ ತಕ್ಷಣವೇ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುವಂತೆ ಆದೇಶಿಸಿದ್ದರೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ರಾಮನಗರ ರವರು ತಡಮಾಡಿದ್ದು ಈ ಬಗ್ಗೆ ತಕ್ಷಣ ಕ್ರಮವಹಿಸುವಂತೆ ಸೂಚಿಸಲು ನಿರ್ಣಯಿಸಲಾಯಿತು.

15. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಕಲಬುರಗಿ ರವರು ನೂತನ ಸೌರ ಬೆಳಕು ಕಾರ್ಯಕ್ರಮದಡಿ 2016-17ರ ಸಾಲಿಗೆ ಮಾರ್ಚ್ 2017ರೊಳಗಾಗಿ ಕಾರ್ಯಕ್ರಮವನ್ನು ಅನುಷ್ಠಾನಿಸಲು ಆದೇಶವಿದ್ಯಾಗ್ಯೂ ಇ-ಟೆಂಡರ್ ಪ್ರಕ್ರಿಯೆ ನಡೆದಿದ್ದರೂ ಯಾವುದೇ ನಿರ್ಣಯ ಕೈಗೊಳ್ಳದೇ ರೂ.55.00ಲಕ್ಷ ಅನುದಾನ ವೆಚ್ಚ ಮಾಡದೇ ಕರ್ತವ್ಯ ಲೋಪ ಎಸಗಿರುವುದರ ಕಾರಣ ಸದರಿಯವರಿಗೆ ನೋಟಿಸ್ ನೀಡಲು ತೀರ್ಮಾನಿಸಲಾಯಿತು.

16. ಆಯಾ ಮಾಹೆಯ ಪ್ರಗತಿ ವರದಿ ಹಾಗೂ ತ್ರೈಮಾಸಿಕ ವರದಿಗಳನ್ನು ನಿಗದಿತ ನಮೂನೆಯಲ್ಲಿ ಕಡ್ಡಾಯವಾಗಿ 5ನೇ ತಾರೀಕಿನೊಳಗೆ ಸರ್ಕಾರಕ್ಕೆ ನೀಡುವಂತೆ ತಿಳಿಸಲಾಯಿತು.

17. ಅಧಿವೇಶನ ಸಮಯದಲ್ಲಿ LA/LCಗೆ ಸಂಬಂಧಿಸಿದ ಉತ್ತರಗಳನ್ನು ಕೂಡಲೇ ನೀಡುವಂತೆ ಹಾಗೂ ತಪ್ಪಿದಲ್ಲಿ ಶಿಸ್ತುಕ್ರಮ ಜರುಗಿಸುವುದಾಗಿ ಯೋಜನಾ ಅಭಿಯಂತರರಿಗೆ ಎಚ್ಚರಿಕೆ ನೀಡಲಾಯಿತು.

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಎನ್ ಕೃಷ್ಣಪ್ಪ ಕೋಡಿಪಾಳ್ಯ)
ನಿರ್ದೇಶಕರು(ಗ್ರಾಮೂಸೌ-2) ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಕಡತ ಸಂಖ್ಯೆ:ಗ್ರಾಅಪ/43/ಜೈಅಯೋ/2017 ಬೆಂಗಳೂರು, ದಿನಾಂಕ.17.08.2017.

ಗೆ:

1. ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.
2. ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಯೋಜನಾ ಅಭಿಯಂತರರು(ಸಗ್ರಾಇಂಕಾ).
3. ರಕ್ಷ ಕಡತ / ಹೆಚ್ಚುವರಿ ಪ್ರತಿ.

ಪ್ರತಿಯನ್ನು,

1. ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಂ.ರಾಜ್) ರವರ ಆಪ್ತ ಕಾರ್ಯದರ್ಶಿ, ಗ್ರಾಅಪ ಇಲಾಖೆ.
2. ವಿಶೇಷ ಅಧಿಕಾರಿ, ಇಲಾಖಾ ಗಣಕಜಾಲ, ಗ್ರಾಅಪ ಇಲಾಖೆ.

16. ಆಯಾ ಮಾಹೆಯ ಪ್ರಗತಿ ವರದಿ ಹಾಗೂ ತ್ರೈಮಾಸಿಕ ವರದಿಗಳನ್ನು ನಿಗದಿತ ನಮೂನೆಯಲ್ಲಿ ಕಡ್ಡಾಯವಾಗಿ 5ನೇ ತಾರೀಕಿನೊಳಗೆ ಸರ್ಕಾರಕ್ಕೆ ನೀಡುವಂತೆ ತಿಳಿಸಲಾಯಿತು.

17. ಅಧಿವೇಶನ ಸಮಯದಲ್ಲಿ LA/LC ಸಂಬಂಧಿಸಿದ ಉತ್ತರಗಳನ್ನು ಕೂಡಲೇ ಹಾಗೂ ತಪ್ಪಿದಲ್ಲಿ ಶಿಸ್ತುಕ್ರಮ ಜರುಗಿಸುವುದಾಗಿ ಯೋಜನಾ ಅಭಿಯಂತರರಿಗೆ ಎಚ್ಚರಿಕೆ ನೀಡಲಾಯಿತು.

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಎನ್ ಕೃಷ್ಣಪ್ಪ ಕೋಡಿಹಾಳ್)
ನಿರ್ದೇಶಕರು(ಗ್ರಾಮೂಸೌ-2) ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಕಡತ ಸಂಖ್ಯೆ:ಗ್ರಾಅಪ/43/ಜೈಅಯೋ/2017 ಬೆಂಗಳೂರು, ದಿನಾಂಕ.17.08.2017.

ಗೆ:

1. ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.
2. ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಯೋಜನಾ ಅಭಿಯಂತರರು(ಸಗ್ರಾಇಂಕಾ).
3. ರಕ್ಷ ಕಡತ / ಹೆಚ್ಚುವರಿ ಪ್ರತಿ.

ಪ್ರತಿಯನ್ನು,

1. ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಂ.ರಾಜ್) ರವರ ಆಪ್ತ ಕಾರ್ಯದರ್ಶಿ, ಗ್ರಾಅಪ ಇಲಾಖೆ.
2. ವಿಶೇಷ ಅಧಿಕಾರಿ, ಇಲಾಖಾ ಗಣಕಜಾಲ, ಗ್ರಾಅಪ ಇಲಾಖೆ.

## ದಿನಾಂಕ 03.08.2017 ರಂದು ನಡೆದ ಗ್ರಾಇಂಕಾ ಪ್ರಗತಿ ಪರಿಶೀಲನಾ ಸಭೆಯಲ್ಲಿ ಹಾಜರಾದವರ ಪಟ್ಟಿ.

1. ಶ್ರೀ ಎನ್. ಕೃಷ್ಣಪ್ಪ ಕೋಡಿಪಾಳ್ಯ, ನಿರ್ದೇಶಕರು (ಗ್ರಾಮೂಸೌ–2) ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
2. ಶ್ರೀ ರವಿ ಕುಮಾರ್, ಉಪ ನಿರ್ದೇಶಕರು (ಸಗ್ರಾಇಂಕಾ)(ಪ್ರಭಾರ), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
3. ಶ್ರೀ ಮಾರ್ಕಂಡಯ್ಯ, ಯೋಜನಾ ಅಭಿಯಂತರರು(ಸಗ್ರಾಇಂಕಾ), ಜಿಲ್ಲಾ ಪಂಚಾಯತ್ ಬಾಗಲಕೋಟೆ & ವಿಜಯಪುರ.
4. ಶ್ರೀ ಎಂ. ಎಸ್. ಸುದರ್ಶನ್, ಯೋಜನಾ ಅಭಿಯಂತರರು(ಸಗ್ರಾಇಂಕಾ), ಜಿಲ್ಲಾ ಪಂಚಾಯತ್, ಬೆಂಗಳೂರು(ಗ್ರಾ) ಮತ್ತು ಕೋಲಾರ.
5. ಶ್ರೀ ಶಿವಣ್ಣ, ಯೋಜನಾ ಅಭಿಯಂತರರು(ಸಗ್ರಾಇಂಕಾ), ಜಿಲ್ಲಾ ಪಂಚಾಯತ್, ಬೆಂಗಳೂರು (ನ).
6. ಶ್ರೀ ಶಿವಾನಂದ ಕಮತಗಿ, ಯೋಜನಾ ಅಭಿಯಂತರರು(ಸಗ್ರಾಇಂಕಾ), ಜಿಲ್ಲಾ ಪಂಚಾಯತ್, ಬೆಳಗಾವಿ.
7. ಶ್ರೀ ಜಿ. ಎಲ್. ಬದಿ, ಯೋಜನಾ ಅಭಿಯಂತರರು(ಸಗ್ರಾಇಂಕಾ), ಜಿಲ್ಲಾ ಪಂಚಾಯತ್, ಬಳ್ಳಾರಿ & ಕೊಪ್ಪಳ.
8. ಶ್ರೀ ವೀರಣ್ಣ, ಯೋಜನಾ ಅಭಿಯಂತರರು(ಸಗ್ರಾಇಂಕಾ), ಜಿಲ್ಲಾ ಪಂಚಾಯತ್, ಬೀದರ್.
9. ಶ್ರೀ ಬಸವರಾಜ್ ಯಲಬುರಗಿ, ಯೋಜನಾ ಅಭಿಯಂತರರು(ಸಗ್ರಾಇಂಕಾ), ಜಿಲ್ಲಾ ಪಂಚಾಯತ್, ಮಂಡ್ಯ & ಚಾಮರಾಜನಗರ.
10. ಶ್ರೀ ಶೇಕ್ ಅಹಾಮ್ಮದ್, ಯೋಜನಾ ಅಭಿಯಂತರರು(ಸಗ್ರಾಇಂಕಾ), ಜಿಲ್ಲಾ ಪಂಚಾಯತ್, ಚಿತ್ರದುರ್ಗ.
11. ಶ್ರೀಮತಿ ಸೈಯಾದ ರಹಮಾತ್ ಪ್ಯಾರಿ, ಜಿಲ್ಲಾ ಪಂಚಾಯತ್, ಚಿಕ್ಕಮಗಳೂರು.
12. ಶ್ರೀ ಬಸವರಾಜಪ್ಪ, ಯೋಜನಾ ಅಭಿಯಂತರರು(ಸಗ್ರಾಇಂಕಾ), ಜಿಲ್ಲಾ ಪಂಚಾಯತ್, ದಾವಣಗೆರೆ.
13. ಶ್ರೀ ದತ್ತಾತ್ರಿ, ಯೋಜನಾ ಅಭಿಯಂತರರು(ಸಗ್ರಾಇಂಕಾ), ಜಿಲ್ಲಾ ಪಂಚಾಯತ್, ಹಾಸನ ಮತ್ತು ಕೊಡಗು.
14. ಶ್ರೀ ಕೃಷ್ಣ, ಯೋಜನಾ ಅಭಿಯಂತರರು(ಸಗ್ರಾಇಂಕಾ), ಜಿಲ್ಲಾ ಪಂಚಾಯತ್, ಉತ್ತರ ಕನ್ನಡ & ಧಾರವಾಡ.
15. ಶ್ರೀ ಉತ್ತಮ ಕುಮಾರ, ಯೋಜನಾ ಅಭಿಯಂತರರು(ಸಗ್ರಾಇಂಕಾ), ಜಿಲ್ಲಾ ಪಂಚಾಯತ್, ಹಾವೇರಿ & ಗದಗ.
16. ಶ್ರೀ ಚೆನ್ನಬಸಪ್ಪ ಅವಟೆ, ಯೋಜನಾ ಅಭಿಯಂತರರು(ಸಗ್ರಾಇಂಕಾ), ಜಿಲ್ಲಾ ಪಂಚಾಯತ್, ಕಲಬುರಗಿ.
17. ಶ್ರೀ ನಾಗೇಶ್, ಯೋಜನಾ ಅಭಿಯಂತರರು(ಸಗ್ರಾಇಂಕಾ), ಜಿಲ್ಲಾ ಪಂಚಾಯತ್, ದಕ್ಷಿಣ ಕನ್ನಡ ಮತ್ತು ಉಡುಪಿ.
18. ಶ್ರೀ ಮರಳ ಸಿದ್ದೇಶ್ವರ, ಯೋಜನಾ ಅಭಿಯಂತರರು(ಸಗ್ರಾಇಂಕಾ), ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ.
19. ಶ್ರೀ ಎಂ. ಹೆಚ್. ಭಾಸ್ಕರ್, ಯೋಜನಾ ಅಭಿಯಂತರರು(ಸಗ್ರಾಇಂಕಾ), ಜಿಲ್ಲಾ ಪಂಚಾಯತ್, ಶಿವಮೊಗ್ಗ.
20. ಶ್ರೀ ಎಸ್. ಪಿ. ಪಾಟೀಲ್, ಯೋಜನಾ ಅಭಿಯಂತರರು(ಸಗ್ರಾಇಂಕಾ), ಜಿಲ್ಲಾ ಪಂಚಾಯತ್, ಯಾದಗಿರಿ.
21. ಶ್ರೀ ಶ್ರೀನಿವಾಸ್, ಯೋಜನಾ ಅಭಿಯಂತರರು(ಸಗ್ರಾಇಂಕಾ), ಜಿಲ್ಲಾ ಪಂಚಾಯತ್, ತುಮಕೂರು.
22. ಶ್ರೀಮತಿ ನೇತ್ರಾವತಿ, ಅಧೀಕ್ಷಕರು, ಗ್ರಾಮೂಸೌ–2, ಗ್ರಾಅಪಂ. ರಾಜ್ ಇಲಾಖೆ.